






## ಟ್ಯಾಟೂ ಹಾಕಿಸಿಕೊಳ್ಳುವಾಗ ಇರಲಿ ಎಚ್ಚರ

- ಟ್ಯಾಟೂ ಹಾಕಿಸಿಕೊಳ್ಳುವ ಕಲಾವಿದನ ಬಗ್ಗೆ ಸೂಕ್ತವಾಗಿ ವಿಚಾರಿಸಿ. ಟ್ಯಾಟೂ ಹಾಕುವ ಸ್ಥಳ, ಉಪಕರಣ, ಸ್ವಚ್ಛತೆಯ ಬಗ್ಗೆ ಪರಿಶೀಲಿಸಿ. ಕಲಾವಿದ ಕೌಶಲದ ಬಗ್ಗೆಯೂ ತಿಳಿದುಕೊಳ್ಳಿ.
- ನೋವನ್ನು ಸಹಿಸಿಕೊಳ್ಳಲು ಮಾನಸಿಕವಾಗಿ ಸಿದ್ಧರಾಗಿ.
- ದೇಹದ ಯಾವ ಭಾಗದಲ್ಲಿ ಟ್ಯಾಟೂ ಹಾಕಿಸಿಕೊಳ್ಳಬೇಕು ಎಂಬುದನ್ನು ನಿರ್ಧರಿಸಿ. ವಿನ್ಯಾಸ ಆಯ್ಕೆಗೂ ಸಮಯ ತೆಗೆದುಕೊಳ್ಳಿ.
- ಹಚ್ಚೆ ಹಾಕಿಸಿದ ಜಾಗದ ಚರ್ಮವು ಸಹಜ ಸ್ಥಿತಿಗೆ ಬರಲು ಕೆಲವು ದಿನಗಳೇ ಬೇಕಾಗುತ್ತವೆ. ಹಾಗಾಗಿ ಜಾಗವನ್ನು ಸ್ವಚ್ಛವಾಗಿಡಲು ವಿಶೇಷ ಕಾಳಜಿ ವಹಿಸಿ. ಈಜಲು ಹೋಗಬೇಡಿ.
- ಚರ್ಮ ಸಹಜ ಸ್ಥಿತಿಗೆ ಬರುವವರೆಗೆ ಟ್ಯಾಟೂ ಹಾಕಿದ ಜಾಗವನ್ನು ಮುಟ್ಟುವುದು, ತುರಿಸುವುದು ಮಾಡದಿರಿ.
- ಟ್ಯಾಟೂ ಹಾಕಿಸಿದ ಕೆಲ ದಿನಗಳ ವರೆಗೆ ಸೂರ್ಯನ ಪ್ರಖರ ಕಿರಣಗಳಿಗೆ ಒಡ್ಡಬಾರದು. ಸನ್‌ಸ್ಕ್ರೀನ್ ಲೋಷನ್ ಹಚ್ಚಬಾರದು.

ಕಾಣಬೇಕು ಎನ್ನುವವರಿಗೆ ಇದು ಇಷ್ಟವಾಗುತ್ತದೆ.

### ಆಧ್ಯಾತ್ಮಿಕತೆಗೆ ಮೊರೆ

ನಮ್ಮ ದೇಶದಲ್ಲಿ ಅಧ್ಯಾತ್ಮಕ್ಕೆ ವಿಶೇಷ ಮಹತ್ವವಿರುವುದು ತಿಳಿದೇ ಇದೆ. ಅಧ್ಯಾತ್ಮದ ಸೌಂದರ್ಯವನ್ನು ಆಹ್ವಾದಿಸುವ ಟ್ಯಾಟೂಗಳು ಬಹುಜನರ ಬೇಡಿಕೆ ಪಡೆದಿದೆ. ಮಂತ್ರಗಳು, ಮೂರನೇ ಕಣ್ಣು, ಬುದ್ಧ, ಕಮಲ, ಮಂಡಲ... ಹೀಗೆ ಹಲವು ಆಧ್ಯಾತ್ಮಿಕವನ್ನು ಬಿಂಬಿಸುವ ಚಿತ್ರಗಳು ಟ್ಯಾಟೂ ವಿನ್ಯಾಸವಾಗುತ್ತಿವೆ. ಧ್ಯಾನ, ಯೋಗ ಮಾಡುವವರು ಈ ರೀತಿಯ ಟ್ಯಾಟೂ ಹಾಕಿಸಿಕೊಳ್ಳುತ್ತಾರೆ.

### ಪ್ರಕೃತಿಯೇ ಪ್ರೇರಣೆ

ವಸ್ತ್ರ, ಆಭರಣ... ಸೇರಿದಂತೆ ಫ್ಯಾಷನ್ ಕ್ಷೇತ್ರದ ಹಲವು ವಿಭಾಗಗಳಿಗೆ ಪ್ರಕೃತಿಯೇ ಪ್ರೇರಣೆ ಎನ್ನುವುದು ಸುಳ್ಳಲ್ಲ. ಈ ವರ್ಷ ಪ್ರಕೃತಿಯಿಂದ ಪ್ರೇರಣೆ ಪಡೆದ ಟ್ಯಾಟೂಗಳು ಹೆಚ್ಚು ಜನಪ್ರಿಯತೆ ಪಡೆಯಲಿವೆ ಎನ್ನುತ್ತಾರೆ ಟ್ಯಾಟೂ ಕಲಾವಿದರು. ಲಾಕ್‌ಡೌನ್ ಕಾರಣದಿಂದಾಗಿ ಜನ ಮನೆಯಲ್ಲಿಯೇ ಇದ್ದು ಬೇಸತ್ತಿದ್ದಾರೆ. ಊರು ಸುತ್ತುವುದು, ನಿಸರ್ಗದ ಹಸಿರನ್ನು ಕಣ್ತುಂಬಿಕೊಳ್ಳುವುದು ಸಾಧ್ಯವಾಗದಿರುವ ಈ ಸಮಯದಲ್ಲಿ ಪ್ರಕೃತಿಯ ಸೌಂದರ್ಯವನ್ನು ಬಿಂಬಿಸುವಂತಹ ಟ್ಯಾಟೂಗಳಿಗೆ ಬೇಡಿಕೆ ಹೆಚ್ಚುತ್ತಿದೆ. ಸಸ್ಯ, ಪ್ರಾಣಿಗಳು ಮತ್ತು ಖಗೋಳ ಚಿಹ್ನೆಗಳು ಪ್ರಕೃತಿಪ್ರೇರಿತ ಹಚ್ಚೆ ವಿನ್ಯಾಸಗಳಲ್ಲಿ ಸ್ಥಾನ ಪಡೆದಿವೆ.

### ಸರಳತೆಗೆ ಆದ್ಯತೆ

ಟ್ಯಾಟೂ ಹಾಕಿಸಿಕೊಳ್ಳುವ ಆಸೆಯಿದ್ದು, ನೋವಿನ ಕಾರಣಕ್ಕೆ ಭಯ ಬೀಳುವವರಿಗೆ ಇದೊಂದು ಉತ್ತಮ ಆಯ್ಕೆ. ಯಾವುದೇ ಆಡಂಬರವಿಲ್ಲದೇ ಒಂದೆರಡು ಪದಗಳನ್ನು ಬರೆದುಕೊಳ್ಳಬಹುದು. ಕೈ ಬೆರಳಿನ ಮೇಲೆ ಹೆಸರು ಅಥವಾ ಜನ್ಮದಿನಾಂಕವನ್ನು ಬರೆದುಕೊಳ್ಳಲು ಬಹುತೇಕರು ಇಷ್ಟಪಡುತ್ತಿದ್ದಾರೆ. ಕಣ್ಣಿಗೆ ರಾಚುವಂತೆ ಇದು ಕಾಣುವುದಿಲ್ಲ.

### ಬುಡಕಟ್ಟಿನ ಸೊಬಗು

ಬಹುತೇಕ ಎಲ್ಲ ಬುಡಕಟ್ಟು ಜನಾಂಗಗಳಲ್ಲೂ ಸಂಸ್ಕೃತಿಯ ಭಾಗ. ಬುಡಕಟ್ಟು ಸಮುದಾಯದ ಸಂಪ್ರದಾಯವನ್ನು ಬಿಂಬಿಸುವ ಹಲವು ಆಕೃತಿಗಳ ಟ್ಯಾಟೂ ಯುವಕರ ಅಚ್ಚುಮೆಚ್ಚಾಗಿದೆ.ದಪ್ಪ ರೇಖೆಯಿಂದ ಚಿತ್ರಿಸಿರುವ ಇದು, ಸಂಪ್ರದಾಯಿಕ ಶೈಲಿಯಂತೆ ಅದ್ಧೂರಿಯಾಗಿ ಕಾಣುತ್ತದೆ. ■



> ಟ್ಯಾಟೂ ಫ್ಯಾಷನ್ ಅಲ್ಲ. ಅದು ನಮ್ಮೊಳಗಿನ ಅಭಿವ್ಯಕ್ತಿಯನ್ನು ಪ್ರತಿಬಿಂಬಿಸುತ್ತದೆ. ಅದು ಸಂಪೂರ್ಣವಾಗಿ ವ್ಯಕ್ತಿಯ ವೈಯಕ್ತಿಕ ಅನುಭವಗಳನ್ನು ಅವಲಂಬಿಸಿರುತ್ತದೆ. ಟ್ರೆಂಡ್‌ಗೆ ತಕ್ಕಂತೆ ಮನೆಗೆ ಬಣ್ಣ ಹಚ್ಚುತ್ತೇವೆ. ಆದರೆ, ದೇಹ ಹಾಗಲ್ಲ. ವ್ಯಕ್ತಿತ್ವವನ್ನು ಪ್ರತಿನಿಧಿಸುವ ಟ್ಯಾಟೂ ಕೊನೆಯವರೆಗೂ ಜೊತೆಯಾಗಿರುತ್ತದೆ. ಹೀಗಾಗಿ ಸಾಮಾನ್ಯವಾಗಿ ಆಸಕ್ತಿಗೆ ಅನುಗುಣವಾಗಿ ಟ್ಯಾಟೂ ಹಾಕಿಸಿಕೊಳ್ಳುತ್ತಾರೆ.
>
> **-ರಘು,** ಟ್ಯಾಟೂ ಕಲಾವಿದ